SRI M ABDUL LATHEEF.—Sir, from the table it is seen that posting of Doctors is done in an haphazard and random manner without any discretion for their qualifications. Is it the policy of the Government

SRI A.K. ABDUL SAMAD.—The policy of the Government is to post specialists in each category to the District hospitals and accordingly we have posted. If there is any discrimination we shall enquire into it.

SRI M. ABDUL LATHEEF.—Sir, in L.F. Dispensaries and in very small hospitals no special facilities by way of equipments and other things, are made available. The chart indicates that 74 doctors are working in L F. dispensaries and 232 graduate doctors are working in major hospitals where such facilities are available. If that is the policy of the Government these figures indicates the same view. Which is correct?

SRI A.K. ABDUL SAMAD.—Formerly, in some of the Taluk Headquarters and in some local dispensaries, some post graduates were posted. That must be the reason.

SRI M. ABDUL LATHEEF.—Will the Government atleast now onwards make it a policy to post post graduate doctors to major hospitals and Graduate doctors to smaller hospitals in view of the cost that is involved in training them. Their experience is being wasted in these L,F. dispensaries. The post graduate doctors may kindly be transferred to major hospitals and in their places some graduate doctors may be posted. Will the Government take stepsin this regard?

SRI A.K. ABDUL SAMAD—We will consider it.

Smuggling cases against proprietor of Krishnarajendra Mills, Mysore.

183 SRI H. GANGADHARAN (Krishnaraja).—Will the Chief Minister be pleased to state,—

(a) whether any smuggling cases are pending against the proprietor of Sri Krishnarajendra Mills, Mysore (against Kegriwala);

(b) if so, in which Courts in the State they are pending;

(c) what are the allegations in the each case;

(d) whether there was any recommendation for withdrawal of the said cases?

SRI R. GUNDU RAO (Chief Minister)

(a) No

(b) (c) and (d) Does not arise, in view of reply as (a) above.

ಶ್ರೀ ಹೆಚ್. ಗಂಗಾಧರನ್ .—ನನ್ನ 'ಅ' ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಯಾವ ಆಧಾರದ ಮೇಲೆ ಈ ಮಾಲೀಕರ ಮೇಲೆ ಕಳ್ಳಸಾಗಾಣಿಕೆಯ ಪ್ರಕರಣಗಳು ಇತ್ಯರ್ಥವಾಗದೇ ಉಳಿದಿಲ್ಲವೆಂದು ಹೇಳಿರುವಿರಿ ?

ಶ್ರೀ ಆರ್. ಗುಂಡೂರಾವ್ : —ಇವರುಗಳ ಮೇಲೆ ಕಳ್ಳತನದ ಆಪಾದನೆಗಳು ಇವೆಯೇ ಹೊರತು ಕಳ್ಳಸಾಗಾಣಿಕೆಯ ಮೇಲಿನ ಆಪಾದನೆಗಳೇನೂ ಇಲ್ಲ. ಕಳ್ಳತನವೇ ಬೇರೆ ಕಳ್ಳಸಾಗಣಿಕೆಯೇ ಬೇರೆ.

ಅಧ್ಯಕ್ಷರು .—ಅದು ಬೇರೆ ಸೆಕ್ಷನ್ ಇದು ಬೇರೆ ಸೆಕ್ಷನ್.

ಶ್ರೀ ಆರ್. ಗುಂಡೂರಾವ್ .—ತಾವು ವಕೀಲರಾಗಿದ್ದೀರಿ, ಈ ಸೆಕ್ಷನ್‌ಗಳ ಬಗ್ಗೆ ತಮಗೆ ಗೊತ್ತಿರಬೇಕಾಗಿತ್ತದೆ.

ಶ್ರೀ ಎಚ್ ಗಂಗಾಧರನ್ .—ಈ ಮಾಲೀಕರ ಮೇಲೆ ಕಳ್ಳತನದ ಆಪಾದನೆಗಳು ಇವೆ. ಬೆಂಗಳೂರಿನಲ್ಲಿ ಹಾಗೂ ದೊಡ್ಡಬಳ್ಳಾಪುರದಲ್ಲಿ ಕೇಸ್‌ಗಳು ನಡೆಯುತ್ತಿವೆ. ಈ ಕೇಸ್‌ಗಳನ್ನು ಹಿಂದಿನ ಸರ್ಕಾರದವರು ಹಿಂದಕ್ಕೆ ತೆಗೆದುಕೊಳ್ಳುವುದರ ಬಗ್ಗೆ ಯೋಚಿಸಿತ್ತೆಂದು ನನ್ನ ಗಮನಕ್ಕೆ ಬಂದಿದೆ. ಯಾವ ಯಾವ ಕೋರ್ಟಿನಲ್ಲಿ ಕಳ್ಳತನದ ಆಪಾದನೆಯ ಮೇಲೆ ಎಷ್ಟೆಷ್ಟು ಕೇಸುಗಳು ಇವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್ .—ಈಗ ವಿಜಯಪುರ ಪೋಲೀಸ್ ಠಾಣೆಯಲ್ಲಿ ಸೆಕ್ಷನ್ ೩೮೪ ಹಾಗೂ ೪೧೧ರ ಪ್ರಕಾರ ಆಪಾದನೆಗಳು ಇವೆ. ದೇವನಹಳ್ಳಿ ಪೋಲೀಸ್ ಠಾಣೆಯಲ್ಲಿ ಸೆಕ್ಷನ್ ೩೮೪ ಹಾಗೂ ೪೧೧ರ ಪ್ರಕಾರ ಆಪಾದನೆಗಳು ಇವೆ. ಪುನಃ ದೇವನಹಳ್ಳಿಯಲ್ಲಿ ಇನ್ನೊಂದು ಸೆಕ್ಷನ್ ೩೭೯ರ ಪ್ರಕಾರ ಆಪಾದನೆಗಳು ಇವೆ. ಚಿಕ್ಕಬಳ್ಳಾಪುರದಲ್ಲಿ ಸೆಕ್ಷನ್ ೩೮೦, ೪೦೫, ೫೨೦...ಗಳ ಮೇಲೆ ಆಪಾದನೆಗಳು ಇವೆ. ಅಲ್ಲಿಂದ ಮತ್ತೆ ಪುನಃ ಚಿಕ್ಕಬಳ್ಳಾಪುರದಲ್ಲಿಯೇ ಇನ್ನೊಂದು ಕೇಸ್ ಇದೆ. ಗುಂಡ್ಲುಪೇಟೆಯಲ್ಲಿಯೂ ಸಹ ಒಂದು ಆಪಾದನೆ ಇದೆ. ಹೀಗೆ ಸುಮಾರು ಆಪಾದನೆಗಳು ಅವರ ಮೇಲೆ ದೇವರ ವಿಗ್ರಹಗಳನ್ನು ಕದ್ದ ಆಪಾದನೆಗಳು ಇವೆ.

ಶ್ರೀ ಎಚ್. ಗಂಗಾಧರನ್ .—ಎಷ್ಟು ರೂಪಾಯಿ ಮೌಲ್ಯದ ವಸ್ತುಗಳ ಆಪಾದನೆಗಳು ಇವರ ಮೇಲೆ ಇದೆ

ಶ್ರೀ ಆರ್. ಗುಂಡೂರಾವ್ .—ಈಗ ಟೋಟಲ್ಲಾಗಿ ಇಷ್ಟೇ ಮೌಲ್ಯದ ವಸ್ತುಗಳು ಎಂದು ಹೇಳುವುದಕ್ಕಾಗುವುದಿಲ್ಲ. ಈ ವಿಗ್ರಹಗಳಿಗೆ ಒಂದೊಂದು ಕಡೆ ಒಂದೊಂದು ಮೌಲ್ಯ ಇರುತ್ತದೆ ಈ ವಿಗ್ರಹಗಳಿಗೆ ನಮ್ಮವರು ಹೆಚ್ಚು ಬೆಲೆ ಕೊಡಲು ಸಿದ್ಧವಿಲ್ಲದಿದ್ದರೂ ಹೊರಗಿನ ದೇಶದವರು ಹೆಚ್ಚು ಬೆಲೆ ಕೊಡುವುದಕ್ಕೆ ಸಿದ್ಧವಿದ್ದಾರೆ. ಆದ್ದರಿಂದ ಇಷ್ಟೇ ಬೆಲೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಒಂದು ಕಡೆ ಕಟಕಾಮೇಶ್ವರಿ ವಿಗ್ರಹವನ್ನು, ಇನ್ನೊಂದು ಕಡೆ ಪಾರ್ವತಿ ವಿಗ್ರಹವನ್ನು ಕದ್ದಿದ್ದಾರೆ. ಮತ್ತೊಂದು ಕಡೆ ಹಿತ್ತಾಳೆ ವಿಗ್ರಹವನ್ನು ಸಹ ಕದ್ದಿದ್ದಾರೆ. ಇಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಒಂದೊಂದು ಕಡೆ ಒಂದೊಂದು ಮೌಲ್ಯವಿರುತ್ತದೆ. ಕೆಲವು ಕಡೆ ಇವು ಲಕ್ಷಾಂತರ ರೂಪಾಯಿ ಬೆಲೆ ಬಾಳಬಹುದು. ಕೆಲವು ಕಡೆ ಈ ಮೌಲ್ಯ ಬಾರದೇಹೋಗಬಹುದು.

ಶ್ರೀ ಎಚ್. ಗಂಗಾಧರನ್.—ಇವರುಗಳ ಮೇಲೆ ಇಷ್ಟೊಂದು ಕಳ್ಳತನದ ಆಪಾದನೆ ಇರುವಾಗ ಸರ್ಕಾರ ಏಕೆ ಶೀಘ್ರವಾಗಿ ಮೊಕದ್ದಮೆಗಳನ್ನು ಹಾಕಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ವಿಳಂಬ ಮಾಡುತ್ತಿದೆ ? ಸರ್ಕಾರದವರೇ ಈ ಕೃತ್ಯಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆಂಬ ವಾದ ಇದೆ. ಈ ರೀತಿ ಕಳ್ಳತನಗಳಾಗುತ್ತಿದ್ದರೂ ಸಹಾ ಏಕೆ ಸರ್ಕಾರ ಬಿಗಿ ಕ್ರಮ ಕೈಗೊಂಡಿಲ್ಲ ? ಈ ರೀತಿ ಕಳ್ಳತನಗಳಾದರೆ ಮುಂದೆ ಯಾವ ದೇವಾಲಯಗಳೂ ಉಳಿಯುವುದಿಲ್ಲ. ಸರ್ಕಾರ ಈ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ಆರ್. ಗುಂಡೂರಾವ್. —ಸರ್ಕಾರ ಅವರ ಮೇಲೆ ಯಾವುದೇ ರೀತಿಯ ಸಹಾನುಭೂತಿಯನ್ನು ತೋರಿಸುವುದಕ್ಕೆ ಹೋಗುವುದಿಲ್ಲ. ಕಾನೂನು ಪ್ರಕಾರ ಅವರ ಮೇಲೆ ಕೇಸ್‌ಗಳನ್ನು ಹಾಕಲಾಗಿದೆ. ಕಾನೂನು ಪ್ರಕಾರ ಅವರೂ ಲಾಯರ್‌ಗಳನ್ನು ಇಟ್ಟುಕೊಂಡು ವಾದ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಯಾವುದೇ ರೀತಿಯ ಅಕ್ರಮಗಳನ್ನು ಮುಚ್ಚುವುದಕ್ಕೆ ಸಹಕಾರವನ್ನು ಕೊಡುವುದಿಲ್ಲ. ಹಿಂದಿನ ಸರ್ಕಾರ ಯಾವುದೇ ಸಹಕಾರವನ್ನು ಕೊಟ್ಟಿರಲಿಲ್ಲವೆಂದು ಕಾಣುತ್ತದೆ. ನಮ್ಮ ಸರ್ಕಾರ ಈ ಬಗ್ಗೆ ಪ್ರೋತ್ಸಾಹ ಕೊಡುವ ಪ್ರಶ್ನೆಯೇ ಬರುವುದಿಲ್ಲ.